**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,</u>**

**<u>ಸಿದ್ಧಾಪುರ</u>**

**<u>ಸಿ.ಸಿ ನಂ.596 /2020</u>**

ಫಿರ್ಯಾದಿ : ಸರ್ಕಾರ : ಪೋಲೀಸ್ ಉಪನಿರೀಕ್ಷಕರು,

ಸಿದ್ದಾಪುರ ಪೋಲಿಸ ಠಾಣೆ,

<u>ವಿರುದ್ಧ</u>

ಆರೋಪಿಯ ಹೆಸರು :

1. ಮಂಜುನಾಥ ನಾರಾಯಣ ಮಡಿವಾಳ(ಗೌಡ)
   ವಯಸ್ಸುಃ 55ವರ್ಷ, ಕೃಷಿ,
2. ಅನಂತ ಕನ್ನಾ ಮಡಿವಾಳ(ಗೌಡ),
   ವಯಸ್ಸುಃ 31 ವರ್ಷ, ಕೃಷಿ,
3. ಶಿವಾನಂದ ನಾರಾಯಣ ಮಡಿವಾಳ,
   ವಯಸ್ಸುಃ 40 ವರ್ಷ, ಕೃಷಿ,
4. ಸಚಿನ ಶಿವಾನಂದ ಮಡಿವಾಳ(ಗೌಡ),
   ವಯಸ್ಸುಃ 21 ವರ್ಷ, ಕೃಷಿ,
5. ಹರೀಶ ಶಿವಾನಂದ ಮಡಿವಾಳ(ಗೌಡ),
   ವಯಸ್ಸುಃ 19 ವರ್ಷ, ಕೃಷಿ,
6. ಅಣ್ಣಪ್ಪ ಮಂಜುನಾಥ ಮಡಿವಾಳ(ಗೌಡ),
   ವಯಸ್ಸುಃ 21 ವರ್ಷ, ಕೃಷಿ,
7. ಸುರೇಶ ನಾರಾಯಣ ಮಡಿವಾಳ(ಗೌಡ),
   ವಯಸ್ಸುಃ 44 ವರ್ಷ, ಕೃಷಿ,
8. ಕೃಷ್ಣಾ ಕನ್ನಾ ಮಡಿವಾಳ(ಗೌಡ),
   ವಯಸ್ಸುಃ 35 ವರ್ಷ, ಕೃಷಿ,
9. ದಿನೇಶ ರಾಮಾ ಗೌಡ,
   ವಯಸ್ಸುಃ 24 ವರ್ಷ, ಕೃಷಿ,
10. ರಾಮಾ ಸುಬ್ಬಾ ಗೌಡ,
    ವಯಸ್ಸುಃ 53 ವರ್ಷ, ಕೃಷಿ,

ಮೇಲಿನ ಎಲ್ಲರೂ ವಾಸಃ ಕುರುವಂತೆ, ತಾಃ ಸಿದ್ದಾಪುರ.

**ದಂಡ ಪ್ರಕಿಯಾ ಸಂಹಿತೆ ಕಲಂ 313 ರಡಿ ಆರೋಪಿಯ ಹೇಳಿಕೆ**

**ಪ್ರಶ್ನೆ:1** ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀಯಾ?

**ಉತ್ತರ:–**

**ಪ್ರಶ್ನೆ:** 2. **ಫ್ರಾಸಾ:1/ಚಾಸಾ–1 ದೇವೇಂದ್ರ ಗಣಪತಿ ನಾಯ್ಕ** ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಸಾಕ್ಷಿಯು 2018 ರಲ್ಲಿ ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7/2 ರಲ್ಲಿ 1 ಎಕರೆ 17 ಗುಂಟೆ ಜಮೀನನ್ನು ರಾಜಾರಾಮ ಕೃಷ್ಣ ಭಟ್ ರವರಿಂದ ಖರೀದಿ ಮಾಡಿರುತ್ತೇನೆ ಎಂದು ಆರೋಪಿತರು ಗೊತ್ತು ಎಂದು ತನ್ನ ಜಮೀನಿನ ಪಕ್ಕದಲ್ಲಿ ಆರೋಪಿತರ ಜಮೀನು ಇರುತ್ತದೆ ಎಂದು, ದಿ: 16–07–2020 ರಂದು ಬೆಳಿಗ್ಗೆ 10–00 ಗಂಟೆಗೆ ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7/2 ರಲ್ಲಿ ತಾನು ಮತ್ತು ಚಾಸಾ–4 ರಿಂದ 6 ರವರು ಜಮೀನಿನಲ್ಲಿ ನೆಟಿ ಮಾಡುತ್ತಿದ್ದು, ಚಾಸಾ–7 ಮತ್ತು 8 ರವರು ಸದರಿ ಸ್ಥಳದಲ್ಲಿ ಇದ್ದು, 2ನೇ ಆರೋಪಿತನಾದ ನೀನು ಸದರಿ ಸ್ಥಳಕ್ಕೆ ಬಂದು ಅವಾಚ್ಯ ಶಬ್ದಗಳಿಂದ ಬೈದು, ತನ್ನನ್ನು ಕುತ್ತಿಗೆ ಹಿಡಿದು ದೂಡಿದ್ದರು ಎಂದು, ನಂತರ 4 ರಿಂದ 6 ನೇ ಆರೋಪಿತರುಗಳಾದ ನೀವುಗಳು ಸಾಕ್ಷಿಗೆ ಬಡಿಗೆಯಿಂದ ಹೊಡೆದಿರುತ್ತೀರಿ ಎಂದು, 8 ನೇ ಆರೋಪಿತನಾದ ನೀನು ಕತ್ತಿಯಿಂದ ಹೊಡೆದಿರುತ್ತಾನೆ ಎಂದು, ನಂತರ ತನ್ನ ತಮ್ಮನಾದ ಚಾಸಾ–4 ರವರಿಗೆ 4 ಮತ್ತು 6ನೇ ಆರೋಪಿತರು ಕೈಯಿಂದ ಗುದ್ದಿರುತ್ತಾರೆ ಎಂದು ನಂತರ ಸದರಿ ಗಲಾಟೆಯನ್ನು ನಮ್ಮ ಊರಿನವರು ಬಿಡಿಸಿರುತ್ತಾರೆ. ನಂತರ ಆರೋಪಿತರಾದ ನೀವುಗಳು ಸಾಕ್ಷಿಯನ್ನು ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ**:–

**ಪ್ರಶ್ನೆ:** 3. **ಫ್ರಾಸಾ:1/ಚಾಸಾ–1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು,** ಚಾಸಾ–7 ಮತ್ತು 8 ರವರನ್ನು ಓಮಿನಿ ಕಾರಿನಲ್ಲಿ ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗಾಗಿ ದಾಖಲಿಸಿರುತ್ತಾರೆ ಎಂದು, ಆಗ ಸಿದ್ದಾಪುರ ಪೊಲೀಸರು ಆಸ್ಪತ್ರೆಗೆ ಬಂದಾಗ ತಾನು ಪೋಲೀಸರಿಗೆ

ಹೇಳಿಕೆ ದೂರು ನೀಡಿರುತ್ತೇನೆ ಎಂದು, ಸದರಿ ಹೇಳಿಕೆ ದೂರನ್ನು ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1 (ಎ) ಎಂದು, ಅದೇ ದಿನ ಬೆಳಿಗ್ಗೆ 11-00ರಿ ಂದ 11-30 ವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದು, ಪಂಚನಾಮೆಯನ್ನು ನಿ.ಪಿ-2 ಎಂದು, ಸಹಿಯನ್ನು ನಿ.ಪಿ-2(ಎ) ಎಂದು, ಸದರಿ ಸ್ಥಳದಲ್ಲಿ 4 ಬಡಿಗೆ ಮತ್ತು ಒಂದು ಕತ್ತಿಯನ್ನು ಮು.ಮಾ-1 ಎಂದು, ಭಾವಚಿತ್ರವನ್ನು ನಿ.ಪಿ-3 ಮತ್ತು 4 ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ:-**

**ಪ್ರಶ್ನೆ: 4. ಫ್ರಾಸಾಃ2/ಚಾಸಾ-3 ಈರಾ ಈಶ್ವರ ನಾಯ್ಕ ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು,** ಚಾಸಾ-1 ಮತ್ತು 2 ಗೊತ್ತು ಎಂದು, ಪಂಚನಾಮೆಯನ್ನು ನಿ.ಪಿ-2 ಎಂದು, ಸಹಿಯನ್ನು ನಿ.ಪಿ-2 (ಬಿ) ಎಂದು, ಪಂಚನಾಮೆ ಕಾಲಕ್ಕೆ ಬಡಿಗೆ ಮತ್ತು ಕತ್ತಿಯನ್ನು ವಶಪಡಿಸಿಕೊಂಡಿದ್ದು, ಪಂಚನಾಮೆ ಕಾಲಕ್ಕೆ ಎರಡು ಪೊಟೊಗಳನ್ನು ತೆಗೆದಿರುತ್ತಾರೆ ಎಂದು, ಬಡಿಗೆ ಮತ್ತು ಕತ್ತಿಯನ್ನು ಮುಮಾ-1 ಎಂದು, ಸಹಿಯನ್ನು ಮು.ಮಾ-1(ಬಿ) ಎಂದು, ಎರಡು ಭಾವಚಿತ್ರವನ್ನು ನಿ.ಪಿ-3 ಮತ್ತು 4 ಎಂದು, ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ:-**

**ಪ್ರಶ್ನೆ: 5. ಫ್ರಾಸಾಃ3/ಚಾಸಾ-4 ಗಜಾನನ ಗಣಪತಿ ನಾಯ್ಕ** ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಚಾಸಾ-1 ತನ್ನ ಅಣ್ಣ ಎಂದು, ಚಾಸಾ-5 ರಿಂದ 8 ನಮ್ಮ ಸಂಬಂದಿಕರು ಎಂದು, ಚಾಸಾ-1 ರವರಿಗೆ ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7 ರಲ್ಲಿ 1 ಎಕರೆ 30 ಗುಂಟೆ ಜಮೀನು ಇರುತ್ತದೆ ಎಂದು, ನ್ಯಾಯಾಲಯದ ಮುಂದೆ ಆರೋಪಿತರನ್ನು ಗುರುತಿಸಿ, ಸದರಿ ಕುರುವಂತೆ ಗ್ರಾಮ ಸರ್ವೆ ನಂ 7 ಕ್ಕೆ ಹೊಂದಿಕೊಂಡಂತೆ ಆರೋಪಿತರಿಗೆ ಕುರವಂತೆ ಗ್ರಾಮ ಸರ್ವೆ ನಂ 8 ರ ಜಮೀನು ಇರುತ್ತದೆ ಎಂದು, ದಿಃ 16-07-2020 ರಂದು ಬೆಳಿಗ್ಗೆ 10-00 ರಿಂದ 10-30 ಗಂಟೆಗೆ ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7 ರಲ್ಲಿ ಸಾಕ್ಷಿಯು ಮತ್ತು ಚಾಸಾ-1, 5 ರಿಂದ 8

ರವರು ಜಮೀನಿನಲ್ಲಿ ನೆಟಿ ಮಾಡುತ್ತಿದ್ದೇವು ಎಂದು 2ನೇ ಆರೋಪಿಯ ಆದ ನೀನು ಚಾಸಾ-1 ರವರಿಗೆ ಕೈಗೆ ಮತ್ತು ಕಾಲಿಗೆ ಬಡಿಗೆಯಿಂದ ಹೊಡೆದು, ಅವಾಚ್ಯ ಶಬ್ದಗಳಿಂದ ಬೈದಿರುರುತ್ತೀಯಾ ಎಂದು 8ನೇ ಆರೋಪಿತನಾದ ನೀನು ಚಾಸಾ-1 ರವರ ತಲೆಗೆ ಕತ್ತಿಯಿಂದ ಹೊಡೆದಿದ್ದು, ಉಳಿದ ಆರೋಪಿತರು ನೀವುಗಳು ಚಾಸಾ-1 ರವರಿಗೆ ಕೈಯಿಂದ ಗುದ್ದಿರುತ್ತಾರೆ ಎಂದು, 4 ಮತ್ತು 6 ನೇ ಆರೋಪಿತರು ಕೈಯಿಂದ ತಲೆಗೆ ಬುಜಕ್ಕೆ ಗುದ್ದಿರುತ್ತಾರೆ ಎಂದು ನಂತರ ಸದರಿ ಗಲಾಟೆಯನ್ನು ಅಲ್ಲಿಂದ ನಮ್ಮ ಸಂಬಂದಿಸಿಕರು ಬಿಡಿಸಿರುತ್ತಾರೆ ಎಂದು, ನಂತರ ತನ್ನನ್ನು ಮತ್ತು ಚಾಸಾ-1 ರವರನ್ನು ಚಾಸಾ-7 ರವರು ಓಮಿನಿ ಕಾರಿನಲ್ಲಿ ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗಾಗಿ ದಾಖಲಿಸಿರುತ್ತಾರೆ ಎಂದು, ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇವೆ ಎಂದು, ನಾವು ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಸಿದ್ದಾಪುರ ಪೋಲೀಸರು ಅಲ್ಲಿಗೆ ಬಂದಿರುತ್ತಾರೆ ಎಂದು, ಸದರಿ ಗಲಾಟೆಗೆ ಸಂಬಂದಿಸಿದಂತೆ ಆರೋಪಿತರ ವಿರುದ್ದ ತನ್ನ ಅಣ್ಣ ಚಾಸಾ-1 ರವರು ಪೋಲೀಸ ಠಾಣೆಯಲ್ಲಿ ದೂರು ನೀಡಿರುತ್ತಾರೆ ಎಂದು, ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ:-**

**ಪ್ರಶ್ನೆ: 6. ಫ್ರಾಸಾಃ4/ಚಾಸಾ-9 ಡಾಃ ರೂಪಾ ಜಯಪ್ರಕಾಶ**. ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿಃ 16-07-2020ರಂದು ಚಾಸಾ-1 ಮದ್ಯಾಹ್ಣ 12-00 ಗಂಟೆಗೆ ಸಮಯದಲ್ಲಿ ಚಾಸಾ-1 ದೇವೇಂದ್ರ ಗಣಪತಿ ನಾಯ್ಕ ರವರು ಹಲ್ಲೆಯ ಹಿನ್ನಲೆಯಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ಬಂದಿರುತ್ತಾರೆ ಎಂದು, ಅವರನ್ನು ಪರಿಕ್ಷೀಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ ಎಂದು, Cut injury over scalp measuring 1-2 1.5 ಸೆಂ. ಮೀ ಇರುತ್ತದೆ ಎಂದು, Stapling done (2 staples), ಸದ್ರಿ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ ಎಂದು, ಈ ಬಗ್ಗೆ ತಾನು ಗಾಯದ ಪ್ರಮಾಣಪತ್ರವನ್ನು ನಿ.ಪಿ-5, ಸಹಿಯನ್ನು ನಿ.ಪಿ-5(ಎ) ಎಂದು ಗುರುತಿಸಿ ಈ ಮೇಲ್ಕಂಡ ಗಾಯಗಳು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಕತ್ತಿಯಿಂದ ಹೊಡೆದಾಗ ಆಗುವ ಸಾಧ್ಯತೆ ಇದ್ದು, ಸದರಿ ಗಾಯವು ತನ್ನ ಅಭಿಪ್ರಾಯದಲ್ಲಿ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ದಿಃ 16-07-2020 ರಂದು ಚಾಸಾ-4 ಮದ್ಯಾಹ್ಣ 12-00 ಗಂಟೆಗೆ ಸಮಯದಲ್ಲಿ ಚಾಸಾ-4 ಗಜಾನನ ಗಣಪತಿ ನಾಯ್ಕ ರವರು ಹಲ್ಲೆಯ ಹಿನ್ನಲೆಯಲ್ಲಿ

ಗಾಯಗೊಂಡು ಚಿಕಿತ್ಸೆಗಾಗಿ ಬಂದಿರುತ್ತಾರೆ. ಅವರನ್ನು ಪರಿಕ್ಷೀಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ. No external injuries found at the time of my examination. ಈ ಬಗ್ಗೆ ನಾನು ಗಾಯದ ಪ್ರಮಾಣಪತ್ರವನ್ನು ನಿ.ಪಿ–6 ಎಂದು, ಸಹಿಯನ್ನು ನಿ.ಪಿ–6(ಎ) ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ:–**

**ಪ್ರಶ್ನೆ: 7**. **ಪ್ರಾಸಾಃ 5/ಚಾಸಾ–6 ಕೃಷ್ಣ ವೀರಭದ್ರ ನಾಯ್ಕ** ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಚಾಸಾ–1, 5 ,7 ,8 ರವರು ಗೊತ್ತು ಎಂದು, ದಿಃ 16–07–2020 ರಂದು ಬೆಳಿಗ್ಗೆ 10–30 ಕ್ಕೆ ಚಾಸಾ–1 ರವರ ಗದ್ದೆ ಕೆಲಸಕ್ಕೆ ತಾನು ಚಾಸಾ–5 ಮತ್ತು 7ರವರು ಹೋಗಿದ್ದೆವು ಎಂದು, ಚಾಸಾ–1ರವರ ಗದ್ದೆ ಯಲ್ಲಿ ಕೆಲಸ ಮಾಡುತ್ತಿರುವಾಗ 2ನೇ ಆರೋಪಿ ಅಲ್ಲಿಗೆ ಬಂದು, ಚಾಸಾ–1ರವರಿಗೆ ಹೊಡೆಯಲು ಪ್ರಾರಂಬಿಸಿರುತ್ತಾರೆ. 8ನೇ ಆರೋಪಿ ಕತ್ತಿಯನ್ನು ತೆಗೆದುಕೊಂಡು ಬಂದು ಚಾಸಾ–1ರವರ ಎಡಮುಖಕ್ಕೆ ಕತ್ತಿಯಿಂದ ಹೊಡೆದಿರುತ್ತಾರೆ. 2ನೇ ಆರೋಪಿ ಚಾಸಾ–4ರವರಿಗೆ ಬಡಿಗೆಯಿಂದ ಹೊಡೆದಿರುತ್ತಾರೆ. ಉಳಿದ ಆರೋಪಿತರು ಸಹ ಚಾಸಾ–1ಮತ್ತು 4ರವರಿಗೆ ಬಡಿಗೆಯಿಂದ ಹೊಡೆದಿರುತ್ತಾರೆ. ಸದರಿ ಗಲಾಟೆಯನ್ನು ತಾನು ಮತ್ತು ಚಾಸಾ–7 ಮತ್ತು 8ರವರು ಬಿಡಿಸಿರುತ್ತೇವೆ. ಪ್ರಕರಣಕ್ಕೆ ಸಂಬಂದಿಸಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು, ನಾಲ್ಕು ಬಡಿಗೆ ಮತ್ತು ಕತ್ತಿಯನ್ನು ಮು.ಮಾ–1 ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ:–**

**ಪ್ರಶ್ನೆ: 8**. **ಪ್ರಾಸಾಃ 6/ಚಾಸಾ–7 ಸುಧಿರ ಸದಾಶೀವ ನಾಯ್ಕು** ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಚಾಸಾ–1, 4 ರಿಂದ 6 ಮತ್ತು 8 ರವರು ಗೊತ್ತು ಎಂದು, ದಿಃ 16–07–2020 ರಂದು ಬೆಳಿಗ್ಗೆ 10–30 ಕ್ಕೆ ಚಾಸಾ–1 ರವರ ಗದ್ದೆ ಕೆಲಸಕ್ಕೆ ಸಾಕ್ಷಿಯು ಚಾಸಾ–8 ರವರು ಹೋಗಿದ್ದು, ಚಾಸಾ–1 ರವರ ಗದ್ದೆ ಯಲ್ಲಿ ಕೆಲಸ ಮಾಡುತ್ತಿರುವಾಗ 4ನೇ ಆರೋಪಿ ಅಲ್ಲಿಗೆ ಬಂದು, ಕತ್ತಿಯಿಂದ ಮತ್ತು ಬಡಿಗೆಯಿಂದ ಚಾಸಾ–1 ರವರಿಗೆ ಹೊಡೆದಿರುತ್ತಾರೆ ಎಂದು, ಸದರಿ

4ನೇ ಆರೋಪಿ ಜೊತೆ ಸುಮಾರು 8-10 ಜನ ಇದ್ದು ಸದರಿಯವರು ಸಹ ಚಾಸಾ-1 ಮತ್ತು ಚಾಸಾ-4 ರವರಿಗೆ ಹೊಡೆದಿರುತ್ತಾರೆ. ಜೀವ ಬೆದರಿಕೆ ಹಾಕಿ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು, ಸದರಿ ಗಲಾಟೆಯನ್ನು ಸಾಕ್ಷಿಯು ಮತ್ತು ಚಾಸಾ-5, 6 ಮತ್ತು 8 ರವರು ಬಿಡಿಸಿರುತ್ತೇವೆ ಎಂದು, ನಾಲ್ಕು ಬಡಿಗೆ ಮತ್ತು ಕತ್ತಿಯನ್ನು ಮು.ಮಾ-1 ಎಂದು, ಗುರುತಿಸಿ, ಚಾಸಾ-1 ಮತ್ತು 4ರವರನ್ನು ಸಿದ್ದಾಪುರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುತ್ತೇವೆ. ಎಂದು ಆ ಬಗ್ಗೆ ಸಾಕ್ಷಿಯು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ:-**

**ಪ್ರಶ್ನೆಃ 9**. **ಪ್ರಾಸಾಃ7/ ಚಾಸಾ-8 ಭಾಸ್ಕರ ಕಲ್ಲಾ ನಾಯ್ಕ** ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಚಾಸಾ-1, 4 ರಿಂದ 7 ರವರು ಗೊತ್ತು ಎಂದು, ದಿಃ 16-07-2020 ರಂದು ಬೆಳಿಗ್ಗೆ 10-30 ಕ್ಕೆ ಚಾಸಾ-1 ರವರ ಗದ್ದೆ ಕೆಲಸಕ್ಕೆ ಸಾಕ್ಷಿಯು ಚಾಸಾ-7 ರವರು ಹೋಗಿದ್ದೆವು ಎಂದು, ಚಾಸಾ-1 ರವರ ಗದ್ದೆಯಲ್ಲಿ ಕೆಲಸ ಮಾಡುತ್ತಿರುವಾಗ, ಆರೋಪಿತರಾದ ನೀವುಗಳು ಚಾಸಾ-1 ಮತ್ತು 4ರವರಿಗೆ ಬಡಿಗೆಯಿಂದ ಹೊಡೆದಿರುತ್ತೀರಿ ಎಂದು, 8ನೇ ಆರೋಪಿ ಚಾಸಾ-1ರವರಿಗೆ ಕತ್ತಿಯಿಂದ ಹೊಡೆದಿದ್ದು, ಜೀವ ಬೆದರಿಕೆ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು, ಸದರಿ ಗಲಾಟೆಯನ್ನು ತಾನು ಮತ್ತು ಚಾಸಾ-5 ರಿಂದ 7ರವರು ಬಿಡಿಸಿರುತ್ತೇವೆ ಎಂದು, ನಾಲ್ಕು ಬಡಿಗೆ ಮತ್ತು ಕತ್ತಿಯನ್ನು ಮು.ಮಾ-1 ಎಂದು ಗುರುತಿಸಿ ಚಾಸಾ-1 ಮತ್ತು 4 ರವರನ್ನು ಸಿದ್ದಾಪುರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುತ್ತೇವೆ. ಆ ಬಗ್ಗೆ ತಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ:-**

**ಪ್ರಶ್ನೆಃ 10**. **ಪ್ರಾಸಾಃ 8/ಚಾಸಾ-10 ರವಿಂದ್ರ ರಮಾಕಾಂತ ನಾಯ್ಕ** ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿಃ 16-07-2020 ರಂದು ಬೆಳಿಗ್ಗೆ ತಾನು ಠಾಣಾ ಪ್ರಭಾರದಲ್ಲಿ ಇದ್ದಾಗ,

ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಿಂದ ಎಂ ಎನ್ ಸಿ ಇದೆ ಎಂದು ಮಾಹಿತಿ ಬಂದಿದ್ದು, ಆ ಪ್ರಕಾರ ತಾನು ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಅಲ್ಲಿ ಚಾಸಾ–1 ರವರನ್ನು ವಿಚಾರಿಸಿ, ಅವರ ಹೇಳಿಕೆ ದೂರನ್ನು ಪಡೆದುಕೊಂಡಿರುತ್ತೇನೆ ಎಂದು, ನಂತರ ಠಾಣೆಗೆ ವಾಪಸ್ ಆಗಿ ಅದೇ ದಿನ ನಮ್ಮ ಠಾಣಾ ಕ್ರೈಂ ಸಂಖ್ಯೆ 99/2020ರಂತೆ ಪ್ರಕರಣ ದಾಖಲಿಸಿ, ಪ್ರ.ವ.ವರದಿಯನ್ನು ತಯಾರಿಸಿ, ಮಾನ್ಯ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಪಿರ್ಯಾದನ್ನು ನಿ.ಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–1 (ಬಿ) ಎಂದು, ಪ್ರ.ವ ವರದಿಯನ್ನು ನಿ.ಪಿ–6 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–6 (ಎ) ಎಂದು, ದಿಃ 17–07–2020 ರಂದು ತಾನು ಘಟನಾ ಸ್ಥಳಕ್ಕೆ ಬೇಟಿ ನೀಡಿ ಚಾಸಾ–2 ಮತ್ತು 3 ರವರ ಸಮಕ್ಷಮ ಚಾಸಾ–1ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 10–00 ರಿಂದ 11–00 ವರೆಗೆ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಸದರಿ ಪಂಚನಾಮೆ ಕಾಲಕ್ಕೆ ಪಂಚರ ಸಮಕ್ಷಮ ಸ್ಥಳದಲ್ಲಿ 4 ಕಾಡು ಜಾತಿಯ ಬಡಿಗೆ ಮತ್ತು ಒಂದು ಕತ್ತಿಯನ್ನು ವಶಪಡಿಸಿಕೊಂಡಿರುತ್ತೇನೆ ಎಂದು, ಭಾವಚಿತ್ರವನ್ನು ನಿ.ಪಿ–3 ಮತ್ತು 4 ಎಂದು, ಚಾಸಾ–1 ರವರನ್ನು ವಿಚಾರಿಸಿ ಅವರ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು, ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ:–**

**ಪ್ರಶ್ನೆಃ 11. ಫ್ರಾಸಾಃ8/ಚಾಸಾ–10 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು,** ಸದರಿ ಸ್ಥಳದಲ್ಲಿ ವಶಪಡಿಸಿಕೊಂಡ 4 ಬಡಿಗೆ ಮತ್ತು ಕತ್ತಿಯನ್ನು ತೆಗೆದುಕೊಂಡು ನಮ್ಮ ಠಾಣೆಗೆ ವಾಪಸ್ ಆಗಿ ನಮ್ಮ ಠಾಣಾ PF No 79/2020 ರಂತೆ ದಾಖಲಿಸಿ ಸದರಿ PF ನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಎಂದು, ಸದರಿ ಬಡಿಗೆ ಮತ್ತು ಕತ್ತಿ ನ್ಯಾಯಾಲಯದ ಮುಂದೆ ಇದ್ದು ಅವುಗಳು ಈಗಾಗಲೇ ಮು.ಮಾ–1 ಎಂದು ಗುರುತಿಸಿರುತ್ತಾರೆ. ಸ್ಥಳ ಪಂಚನಾಮೆಯನ್ನು ನಿ.ಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–2 (ಸಿ) ಎಂದು, ಚಾಸಾ–4 ರಿಂದ 8 ರವರನ್ನು ವಿಚಾರಿಸಿ ಅವರ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು, ದಿಃ 30–07–2020 ರಂದು ಈ ಪ್ರಕರಣದ 1 ರಿಂದ 10ನೇ ಆರೋಪಿತರಿಗೆ ತಮ್ಮ ಠಾಣೆಗೆ ಹಾಜರಾದ ಮೇರೆಗೆ ದಂ.ಪ್ರ.ಸಂ ಕಲಂ 41(ಎ) ರಡಿಯಲ್ಲಿ ಆರೋಪಿಗೆ ನೋಟೀಸ ನೀಡಿರುತ್ತೇನೆ ಎಂದು, ದಂ.ಪ್ರ.ಸಂ ಕಲಂ 41(ಎ) ರಡಿಯಲ್ಲಿ ಆರೋಪಿಗೆ ನೋಟೀಸಗಳನ್ನು ಆಗಿದ್ದು, ಸದರಿ ದಾಖಲೆ ನಿ.ಪಿ–7 ರಿಂದ ನಿ.ಪಿ–17

ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–7 (ಎ) ರಿಂದ ನಿ.ಪಿ–17 (ಎ) ಎಂದು, ದಿಃ 20–08–2020 ರಂದು ಚಾಸಾ–9 ರವರಿಂದ ಚಾಸಾ–1 ಮತ್ತು 4 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿ, ಪರಿಶೀಲಿಸಿ, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು, ಗಾಯದ ಪ್ರಮಾಣ ಪತ್ರಗಳನ್ನು ನಿ.ಪಿ–5 ಮತ್ತು 6 ಎಂದು, ಸಾಕ್ಷಿ ಸಹಿಯನ್ನು ನಿ.ಪಿ–5(ಬಿ) ಮತ್ತು ನಿ.ಪಿ– 6(ಬಿ) ಎಂದು, ಈ ಪ್ರಕರಣದ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತನ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ಆರೋಪಿತ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು, ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ:–**

**ಪ್ರಶ್ನೆಃ 12**. **ಫ್ರಾಸಾಃ 9/ಚಾಸಾ–2 ಕನ್ನಾ ಪುಟ್ಯಾ ನಾಯ್ಕು** ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಚಾಸಾ–1 ತನ್ನ ಅಕ್ಕನ ಮಗ ಎಂದು, ಚಾಸಾ–3 ತನಗೆ ಪರಿಚಯ ಇರುತ್ತಾರೆ ಎಂದು, ದಿಃ 07–07–2020 ರಂದು ಪೋಲೀಸರು ಪಂಚನಾಮೆ ಮಾಡುವ ಸಲುವಾಗಿ ಕುರುವಂತಿ ಗ್ರಾಮದ ಹತ್ತಿರ ಚಾಸಾ–1ರವರ ಜಮೀನಿಗೆ ತಾಗಿ ಇರುವ ಜಂಗಲ್ ನ ಬಳಿ ಕರೆದಿರುತ್ತಾರೆ ಎಂದು, ಪೋಲೀಸರು ಪಂಚನಾಮೆಗೆ ತನ್ನ ಸಹಿ ಪಡೆದುಕೊಂಡು, ನಂತರ ಪೋಟೊಗಳನ್ನು ತೆಗೆದುಕೊಂಡಿರುತ್ತಾರೆ ಎಂದು, ಚಾಸಾ–1 ರವರು ಅಲ್ಲಿ ಒಂದುಕತ್ತಿ ಹಾಗೂ ನಾಲ್ಕು ಬಡಿಗೆಗಳನ್ನು ಪೋಲೀಸರ ಮುಂದೆ ತೆಗೆದುಕೊಂಡು ಬಂದಿದ್ದು, ಅದನ್ನು ಪೋಲೀಸರು ತೆಗೆದುಕೊಂಡು ಹೋಗಿರುತ್ತಾರೆ ಎಂದು ಪಂಚನಾಮೆಯನ್ನು ಬೆಳಿಗ್ಗೆ 10–30 ಗಂಟೆ ಸಮಯದಲ್ಲಿ ಮಾಡಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ನಿಪಿ.2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ–2(ಡಿ) ಎಂದು, ಸಾಕ್ಷಿಯು ಎರಡು ಪೋಟೊಗಳನ್ನು ನಿಪಿ.3 ಮತ್ತು 4 ಎಂದು, ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ಮು.ಮಾ–1 ರಿಂದ 4 ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ:–**

**ಪ್ರಶ್ನೆ: 13**. ಈ ಪ್ರಕರಣ ಕುರಿತು ನಿನಗೆ ಇನ್ನು ಏನಾದರೂ ಹೇಳುವುದು ಇದೆಯೇ ?
ಉತ್ತರಃ

**ಪ್ರಶ್ನೆ: 14**. ನಿನ್ನ ಪರವಾಗಿ ಏನಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುತ್ತೀಯಾ?
ಉತ್ತರಃ

ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ **30-07-2026** ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿದ್ದಾಪುರ.**